ಆ) ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ಹೆಚ್ಚಾಗಿರುವುದು ಕಂಡು ಬಂದಿರುವುದಿಲ್ಲ.

ಆ) ಈ ಬಗ್ಗೆ ಪೋಲೀಸ್ ಇಲಾಖೆಗೆ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಇ) ಈ ಮಟ್ಕಾ ಹಾವಳಿಯು ಹೆಚ್ಚಾಗಿಲ್ಲದಿದ್ದರೂ ಸಹ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದು, ಈ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ ಸಮಯಕ್ಕೆ ಸರಿಯಾಗಿ ದಾಳಿ ಮಾಡಿ ಅಂಥವರ ಮೇಲೆ ಕ್ರಮ ತೆಗೆದುಕೊಂಡಿದೆ.

ಉಪಾಧ್ಯಕ್ಷಿಣಿಯವರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ **ಪಟ್ಟಿಯನ್ನು** ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರೈತರ ಸಾಲ ಮನ್ನಾ ಮಾಡುವುದು

ಶ್ರೀ ಕೆ. ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ನಮ್ಮ ಕರ್ನಾಟಕದ ಮುಖ್ಯ ಮಂತ್ರಿಗಳನ್ನು ಆತ್ಮೀಯತೆಯಿಂದ ಆಹ್ವಾನ ಮಾಡುವುದಕ್ಕೋಸ್ಕರ ಭಾರತೀಯ ಜನತಾ ಪಕ್ಷದವರು ಈವತ್ತು ಇಲ್ಲಿಗೆ ಬಂದ್ದಿದ್ದಾರೆ. ಏತಕ್ಕೆಂದರೆ ವಿಧಾನ ಸಭೆಯಲ್ಲಿ ಈ ರಾಜ್ಯದ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸಾಕಷ್ಟು ಚರ್ಚೆ ಮಾಡಿದೆವು. ಹಿಂದೆ ಬಡ್ಜೆಟ್‌ನಲ್ಲಿ ಕೂಡ ಈ ಬಗ್ಗೆ ಒಪ್ಪಿಕೊಂಡಿದ್ದರು. ಈ ಸಾರಿ ಬಡ್ಜೆಟ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪವೇ ಬಂದಿಲ್ಲ. ಶ್ರೀ ಮೋರೆಯವರು ಹೇಳುತ್ತಿದ್ದಾರೆ, ಇದು ಮುಗಿದುಹೋದ ವಿಷಯ ಎಂದು. ಕೃಷ್ಣ ಕಾವೇರಿ ಬಗ್ಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿವರ್ಷ ತೆಗೆದಿಡಿ ಎಂದು ಹೇಳುತ್ತಿದ್ದೇವೆ. ಅದರ ಬಗ್ಗೆ ಕೂಡ ಸರ್ಕಾರ ಗಮನ ಕೊಡಲಿಲ್ಲ. ಈ ರಾಜ್ಯದ ನಿರುದ್ಯೋಗಿ ಯುವಕರ ಬಗ್ಗೆ ಒಂದು ಉದ್ಯೋಗದ ನಿರ್ಬಂಧವನ್ನು ತೆಗೆಯಬೇಕೆಂದು ಕೇಳುತ್ತಿದ್ದೇವೆ, ಅದರ ಬಗ್ಗೆಯೂ ಗಮನ ಕೊಡುತ್ತಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು:- ನೀವು ಯಾವುದರ ಬಗ್ಗೆ ಮಾತನಾಡುತ್ತಿದ್ದೀರಿ ಎಂದು ಗೊತ್ತಾಗುತ್ತಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ:- ಬಡ್ಜೆಟ್‌ನಲ್ಲಿ ಎಂಟ್ರಿ ಟ್ಯಾಕ್ಸ್ ಜಾಸ್ತಿ ಹಾಕಿರುವುದರಿಂದ ದಿನಬಳಕೆ ವಸ್ತುಗಳ ಬೆಲೆ ಜಾಸ್ತಿ ಆಗಿದೆ. ಇಲ್ಲಿ ನಮಗೆ ಕೂಗಿಕೂಗಿ ಸಾಕಾಗಿದೆ. ನಮ್ಮ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ನಾಳೆ ನಮ್ಮ ರಾಜ್ಯದ ೫ ಲಕ್ಷ ಜನರ ರೈತರ ಜಾಥಾ ತರುತ್ತಿದ್ದಾರೆ, ಅವರಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಆಹ್ವಾನ ಕೊಡುವುದಕ್ಕೆ ನಾವು ಸಭೆಗೆ ಬಂದಿದ್ದೇವೆ. ನಾವು ಎಷ್ಟು ಕೂಗಿದರೂ ಸರ್ಕಾರಕ್ಕೆ ಅರ್ಥವಾಗಿಲ್ಲ. ನಾಳೆ ೫ ಲಕ್ಷ ಜನರು ಬರುತ್ತಿದ್ದಾರೆ. ವಿಧಾನ ಸೌಧಕ್ಕೆ ಮುತ್ತಿಗೆ ಹಾಕುತ್ತಿದ್ದಾರೆ. ಮುಖ್ಯ ಮಂತ್ರಿಗಳು ನಾವು ಕೇಳಿದ ಪ್ರಶ್ನೆಗಳಿಗೆ ವಿಧಾನ ಸಭೆಯಲ್ಲಿ ಉತ್ತರ ಕೊಡಲಿಲ್ಲ.

ಉಪಾಧ್ಯಕ್ಷಣಿಯವರು:- ಆಯಿತು, ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಎಲ್ಲಾ ವ್ಯಾಪಾರಸ್ಥರು, ರೈತರು ಕೂಗುತ್ತಿದ್ದಾರೆ, ಸರ್ಕಾರ ಕಣ್ಮುಚ್ಚಿಕೊಂಡು ಕುಳಿತಿದೆ.

ಉಪಾಧ್ಯಕ್ಷಣಿಯವರು:- ನೀವು ಯಾವ ಸಬ್ಜೆಕ್ಟ್ ಮೇಲೂ ಮಾತನಾಡುತ್ತಿಲ್ಲ. ಇರಿಗೇಷನ್‌ನಿಂದ ಇನ್ನೆಲ್ಲಿಗೊ ಹೋದಿರಿ. ಬೇಡಿಕೆಗಳು ಬಂದಾಗ ತಾವು ಏನು ಬೇಕಾದರೂ ಪ್ರಸ್ತಾಪ ಮಾಡಿ. ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇವತ್ತು, ನಾಳೆ, ನಾಡಿದ್ದು ಎಲ್ಲಾ ಇದೆ. ಆಗ ತಾವು ಏನು ಬೇಕಾದರೂ ಮಾತನಾಡಬಹುದು. ಈ ರೀತಿ ನೀವು ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಜಿ. ಎಸ್. ಆಚಾರ್:- ಮಾನ್ಯ ಉಪಾಧ್ಯಕ್ಷಣಿಯವರೆ:-

ಅ) ಕುಂದಾಪುರ ತಾಲ್ಲೂಕಿನ ಕೊಲ್ಲೂರು ನೇರಳೇಕಟ್ಟೆ ರಸ್ತೆಗೆ ಡಾಂಬರೀಕರಣಗೊಳಿಸುವ ಬಗ್ಗೆ,

ಆ) ಉಪ್ಪಿನ ಕುದುರು ಗ್ರಾಮಕ್ಕೆ ಪ್ರೌಢ ಶಾಲೆಯನ್ನು ಮಂಜೂರ್ಮಾಡುವ ಬಗ್ಗೆ,

ಇ) ಶಿರೂರಿನಲ್ಲಿ ಚಿಕ್ಕ ಬಂದರು ಮತ್ತು ಮಂಜುಗಡ್ಡೆ ಕಾರ್ಖಾನೆ ಸ್ಥಾಪನೆ ಬಗ್ಗೆ,

ಈ) ಗ್ರಾಮ ಲೆಕ್ಕಿಗರ ಸ್ವಾಧೀನದಲ್ಲಿರುವ ಆರ್. ಟಿ. ಸಿ. ಪುಸ್ತಕಗಳನ್ನು ತಹಶೀಲ್ದಾರರ ವಶಕ್ಕೆ ಕೊಡುವ ಬಗ್ಗೆ,

ಉ) ಹೇರೂರು ರಸ್ತೆಯು ಅಪೂರ್ಣವಾಗಿದ್ದು ಅದನ್ನು ಪೂರ್ಣಗೊಳಿಸುವ ಬಗ್ಗೆ.

ಉಪಾಧ್ಯಕ್ಷಣಿಯವರು:- ಅರ್ಜಿಗಳನ್ನು ಒಪ್ಪಿಸಲಾಯಿತು.

(ಮಾನ್ಯ ಸದಸ್ಯರಾದ ಈಶ್ವರಪ್ಪನವರು ಮಾತನಾಡುತ್ತಿದ್ದರು.)

ಉಪಾಧ್ಯಕ್ಷಣಿಯವರು:- ತಾವು ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. I have called him and he has presented the petitions. ಈಗ ಒಳನೇ ನಿಯಮದ ಮೇರೆಗೆ ಬರುವ ವಿಷಯಗಳು. ಶ್ರೀಯುತ ಇಸಾಮಿಯ ಅವರು.

ಶ್ರೀ ಡಿ. ಬಿ. ಗಂಗಪ್ಪ:- ಪ್ರತಿಯೊಬ್ಬ ರೈತರೂ ೩೦೦ರಿಂದ ೫೦೦ ಎಕರೆವರೆಗೆ ಶೇಂಗಾ ಬೆಳೆದುಕೊಂಡು ಬಹಳ ಸಂತೋಷದಿಂದ ಇದ್ದಾರೆ. ರೈತರಿಗೆ ಕಷ್ಟ ಆಗಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು:- ಮಾನ್ಯ ಈಶ್ವರಪ್ಪನವರೇ, ಏನಾದರೂ ನೀವು ಮಾತನಾಡಬೇಕಾದರೆ ಯಾವ ವಿಷಯದಲ್ಲಿ ತಾವು ಮಾತನಾಡುತ್ತೀರಿ ಎಂಬುದನ್ನು ನನಗೆ ತಿಳಿಸಿ ಮಾತನಾಡಬೇಕು. ಎಲ್ಲಾ ವಿಷಯ ತೆಗೆದುಕೊಂಡು ಮಾತನಾಡುವುದಾದರೆ ಇಲ್ಲಿ ಸಭೆ ನಡೆಸುವುದಕ್ಕಾಗುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಡಿಮ್ಯಾಂಡ್ಸ್ ಮೇಲೆ ಮಾತನಾಡುತ್ತೇನೆ ಎಂದರೆ ಖಂಡಿತ